

ಮನೆಯ ಹೊರಗಿನ ಓಡಾಟಗಳು, ಸಾಹಸ ಕಾರ್ಯಗಳು ಗಂಡಸಿಗೆ ಭೂಷಣವೆಂದು ಪರಿಗಣಿಸಲಾಗುತ್ತದೆ. ಮನೆಯ ಹೊರಗಿನ ಸಾಹಸಗಳನ್ನು ನಿಭಾಯಿಸುತ್ತಿರುವ ವ್ಯಕ್ತಿಯು ಮನೆಯ ಜವಾಬ್ದಾರಿಗಳನ್ನೇನಾದರೂ ಮರೆತರೆ ಅದಕ್ಕೆ ವಿನಾಯಿತಿ ಇದೆ. ವಿಶಾಲ ಜಗತ್ತಿನಲ್ಲಿ ಏಕಾಂಗಿ ಪಯಣಿಸುವ ಸಂಪೂರ್ಣ ಸಂತೋಷವನ್ನು ಅವನು ಅನುಭವಿಸಿದರೆ ಅದೇನೂ ಅಪರಾಧವಲ್ಲ ಎಂದೇ ನಂಬಲಾಗುತ್ತದೆ.

ನಿಜ. ಅಪರಾಧವೇನೂ ಅಲ್ಲ. ಆದರೆ ಇದೇ ನಿಯಮಗಳು ಮಹಿಳೆಗೆ ಅನ್ವಯವಾಗುತ್ತವೆಯೇ? ಖಂಡಿತಾ ಇಲ್ಲ.

ಮನೆಯ ಹೊರಗಿನ ಜಗತ್ತು ಅಷ್ಟೇನೂ ಸುಂದರವಾಗಿಲ್ಲ ಎಂಬ ಉಪದೇಶದೊಂದಿಗೆಯೇ ಹೆಣ್ಣುಮಗುವನ್ನು ಬೆಳೆಸುತ್ತೇವೆ. ‘ಅದು ಅವನಿಗೆ ತಕ್ಕುದಾದ ಆಡುಂಬೊಲ’ ಮತ್ತು ‘ಅವನು ಅಲ್ಲಿ ಏನು ಬೇಕಿದ್ದರೂ ಮಾಡಬಹುದು’ ಎಂಬ ರಹದಾರಿಯನ್ನೂ ಇದೇ ಉಪದೇಶದಲ್ಲಿ ಪರೋಕ್ಷವಾಗಿ ನೀಡಲಾಗುತ್ತದೆ. ಈ ಪರೋಕ್ಷ ಸಂದೇಶವು ಮನೆಯಲ್ಲಿ ಗಂಡುಮಕ್ಕಳ ಆತ್ಮವಿಶ್ವಾಸಕ್ಕೆ ಸಾಕಷ್ಟು ಬಲ ತುಂಬುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.

ಮನೆಯ ಹೊರಗಿನ ಓಡಾಟದ ವಿಷಯವನ್ನೇ ತೆಗೆದುಕೊಳ್ಳೋಣ. ಯಾವುದೇ ಪ್ರಯಾಣದ ಸಂದರ್ಭದಲ್ಲಿ ಕಳ್ಳತನ, ಆಕ್ರಮಣ, ಮೋಸಹೋಗುವಿಕೆ ಮುಂತಾದ ಅನೇಕ ಸಮಸ್ಯೆಗಳು ಪುರುಷರಿಗೂ ಎದುರಾಗಬಹುದು. ಆದರೆ ಅವುಗಳನ್ನೆಲ್ಲ ನಿಭಾಯಿಸಲು ನೀನು ಸಮರ್ಥ ಎಂಬ ಆತ್ಮವಿಶ್ವಾಸವನ್ನು ಅವನಲ್ಲಿ ಬಾಲ್ಯದಿಂದಲೇ ತುಂಬಿರುವುದರಿಂದ, ಮನೆಯಿಂದ ಹೊರಗೆ ಹೋಗುವಾಗ ಅವನೆದೆಯಲ್ಲಿ ಅಳುಕು ಇರುವುದಿಲ್ಲ. ಅವನಷ್ಟೇ ಅಲ್ಲ, ಮನೆಯಲ್ಲಿ ಯಾರೂ ಆ ಬಗ್ಗೆ ಆತಂಕಪಡುವುದಿಲ್ಲ. ಪ್ರಯಾಣದಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸುವುದು ಅವನ ಪಾಲಿಗೆ ಸಾಹಸೀ ಪ್ರವೃತ್ತಿಯನ್ನು ಮೆರೆಯಲು ದೊರೆಯುವ ಅವಕಾಶವಾಗಿದೆ.



ಗಂಡು ದುರಭಿಮಾನ ಎನ್ನುವುದು ನಮ್ಮ ಸಮಾಜದಲ್ಲಿರುವ ಬಹುಸಂಖ್ಯಾತ ಪುರುಷರ ರಕ್ತದ ಕಣಕಣದಲ್ಲಿಯೂ ಹರಿಯುತ್ತಿದೆ. ಅದಕ್ಕೆ ಸಣ್ಣ ಪೆಟ್ಟು ಕೊಟ್ಟರೂ ಬಹಳ ಆಕ್ರಮಣಕಾರಿಯಾಗಿ ಮರುದಾಳಿ ಮಾಡುತ್ತದೆ. ಸದ್ಯ ಸಂವಿಧಾನ ಮಹಿಳೆಗೆ ನೀಡಿದ ಹಕ್ಕುಗಳು ಜಾರಿಗೊಳ್ಳುತ್ತಿರುವ ಪರಿಣಾಮವಾಗಿ ಆಕೆ ಸ್ವತಂತ್ರವಾಗಿ ಜೀವಿಸಲು, ಯೋಚಿಸಲು ಪ್ರಯತ್ನಿಸುತ್ತಿದ್ದರೆ, ಪುರುಷರಿಗೆ ಇದರಿಂದ ಅಸಹನೆಯುಂಟಾಗುತ್ತಿದೆ. ಬಹುಶಃ ಇದೇ ಕಾರಣಕ್ಕೆ ಮಹಿಳೆಯರು ದಾರಿತಪ್ಪುತ್ತಿದ್ದಾರೆ ಎಂಬ ವಾಗ್ದಾಳಿ ನಡೆಸಲಾಗುತ್ತಿದೆ.

**-ರಂಗನಾಥ ಕಂಟನಕುಂಟೆ**
ಸಹಾಯಕ ಪ್ರಾಧ್ಯಾಪಕ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಬ್ಬಳ್ಳಿ

‘ಹೀರೋಗಿರಿ’, ‘ಸಾಹಸ’, ‘ಧೈರ್ಯ’ವನ್ನು ಸಾಬೀತುಪಡಿಸಲು ಇಡೀ ಜಗತ್ತೇ ಪುರುಷರ ಪಾಲಿಗೆ ವೇದಿಕೆಯಾಗಿದ್ದರೆ, ಅಂತಹ ‘ಹೀರೋಗಿರಿ’, ಧೈರ್ಯ ಮತ್ತು ಸಾಹಸವನ್ನು ಮಹಿಳೆಯು ಮನೆಯಲ್ಲಿಯೇ ಇದ್ದು ಸಾಬೀತುಪಡಿಸಬೇಕು ಎಂಬುದು ಸಮಾಜದ ನಿರೀಕ್ಷೆಯಾಗಿರುತ್ತದೆ.

ಗ್ರೀಕ್ ಮಹಾಕಾವ್ಯ ‘ಒಡಿಸಿಯಸ್’ಯಲ್ಲಿ ಬರುವ ನಾಯಕಿ ಪಿನಲೋಪೆ. ಆಕೆ ಸದ್ಗುಣಿ. ಆಕೆಯ ಪತಿ ಒಡೀಸಿಯಸ್ ಯುದ್ಧಕ್ಕಾಗಿ ಇಪ್ಪತ್ತು ವರ್ಷಗಳ ಕಾಲ ಪತ್ನಿಯಿಂದ ದೂರವಿರುತ್ತಾನೆ. ಆದರೂ ಆಕೆ ಅವನಿಗಾಗಿ ದೀರ್ಘಕಾಲ ಕಾಯುತ್ತಾಳೆ. ಹೀಗೆ ಅವಳು ಚಲನೆಯಿಲ್ಲದೆ ಒಂದೇ ಕಡೆ ಕಾಯುವುದು, ಅವಳ ತಾಳ್ಮೆ ತುಂಬಿದ ವ್ಯಕ್ತಿತ್ವ ಮತ್ತು ಅವನಿಲ್ಲದ ವೇಳೆಯಲ್ಲಿ ಆಕೆಯು ಅವನಿಗೆ ನಿಷ್ಠಳಾಗಿ ಮನೆಯಲ್ಲಿಯೇ ಉಳಿದುಕೊಂಡು ಮನೆಯನ್ನು ನಿಭಾಯಿಸುವ ನಾಜೂಕಿನ ಚಾಕಚಕ್ಯತೆಗಳೇ ಆಕೆಯ ಧೈರ್ಯ ಮತ್ತು ಸಾಹಸದ ಪ್ರತೀಕಗಳಾಗಿರುತ್ತವೆ. ಹೀಗೆ ವ್ಯಕ್ತಿಯ ‘ಧೈರ್ಯ ಸಾಹಸ’ಗಳೆಂದರೇನು ಎಂಬ ಪ್ರಶ್ನೆಗೆ ಒದಗುವ ಉತ್ತರಗಳೂ ಹೆಣ್ಣು ಮತ್ತು ಗಂಡಿಗೆ ಬೇರೆ ಬೇರೆಯೇ ಆಗಿರುತ್ತವೆ.

ಅಂದರೆ ಹೆಣ್ಣು ಮತ್ತು ಗಂಡಿಗೆ ವಿಧಿಸಲಾದ ನಿಯಮಗಳಿಗೆ ದೇಶದ ಗಡಿಗಳ ಹಂಗೇನೂ